# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 1082 |
| ಸದಸ್ಯರ ಹೆಸರು | : | ಶ್ರೀ ಸುನೀಲ್ ವಲ್ಯಾಪುರ (ವಿಧಾನಸಭೆಯಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | : | 23-02-2024 |
| ಉತ್ತರಿಸುವವರು | : | ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಸಚಿವರು. |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ. | ಉತ್ತರ ಕರ್ನಾಟಕ, ವಿಶೇಷವಾಗಿ ಕಲ್ಯಾಣ ಕರ್ನಾಟಕ ಭಾಗದ ಮಕ್ಕಳಲ್ಲಿ ಪೌಷ್ಠಿಕಾಂಶದ ಕೊರತೆಯಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಬಂದಿದೆ. |
| ಆ. | ಬಂದಿದ್ದಲ್ಲಿ, ಅಂಗನವಾಡಿ ಕೇಂದ್ರದ ಮಕ್ಕಳಿಗೆ ನೀಡುತ್ತಿರುವ ಪೌಷ್ಠಿಕ ಆಹಾರಗಳು ಯಾವುವು; ಅಂಗನವಾಡಿ ಕೇಂದ್ರಗಳಿಗೆ ಸಿರಿಧಾನ್ಯ ಪೂರೈಸುವ ಯೋಜನೆ ಯಾವ ಹಂತದಲ್ಲಿದೆ ಮಾಹಿತಿ ನೀಡುವುದು; | ಅಂಗನವಾಡಿ ಕೇಂದ್ರದ ಮಕ್ಕಳಿಗೆ ಕೇಂದ್ರ ಸರ್ಕಾರದ ಮಾರ್ಗಸೂಚಿಯಂತೆ 300 ದಿನಗಳ ಈ ಕೆಳಕಂಡ ಆಹಾರವನ್ನು ಪೂರಕ ಪೌಷ್ಠಿಕ ಆಹಾರದ ಕಾರ್ಯಕ್ರಮದಡಿ ವಿತರಿಸಲಾಗುತ್ತಿದೆ.<br><br>06 ತಿಂಗಳಿಂದ 03 ವರ್ಷದ ಮಕ್ಕಳಿಗೆ ಪುಷ್ಠಿ ಪುಡಿಯನ್ನು ಮನೆಗೆ ಒದಗಿಸಲಾಗುತ್ತಿದೆ.<br><br>03 ರಿಂದ 06 ವರ್ಷದ ತೀವ್ರ ಅಪೌಷ್ಠಿಕ ಮಕ್ಕಳಿಗೂ ಸಹ ಪುಷ್ಠಿ ಪುಡಿಯನ್ನು ಮನೆಗೆ ವಿತರಿಸಲಾಗುತ್ತಿದೆ.<br><br>03 ರಿಂದ 06 ವರ್ಷದ ಮಕ್ಕಳಿಗೆ ಬೆಳಿಗ್ಗೆ ಮಿಲ್ಲೆಟ್ ಲಡ್ಡು, ಗೋಧಿ ಲಡ್ಡು ನೀಡಲಾಗುತ್ತಿದೆ. ಮಧ್ಯಾಹ್ನದ ಬಿಸಿಯೂಟಕ್ಕೆ ಉಪ್ಪಿಟ್ಟು/ ಸಿಹಿ ಪೊಂಗಲ್/ದಾಲ್ ನೀಡಲಾಗುತ್ತಿದೆ.<br><br>ರಾಜ್ಯ ಸರ್ಕಾರದ ಸೃಷ್ಠಿ ಯೋಜನೆಯಡಿ ಅಂಗನವಾಡಿ ಕೇಂದ್ರದಲ್ಲಿನ 03 ವರ್ಷದಿಂದ 06 ವರ್ಷದ ಎಲ್ಲಾ ಸಾಮಾನ್ಯ ಮಕ್ಕಳಿಗೆ ವಾರದಲ್ಲಿ ಎರಡು ದಿನ ಮೊಟ್ಟೆಯನ್ನು ನೀಡಲಾಗುತ್ತಿದೆ<br><br>06 ತಿಂಗಳಿನಿಂದ 03 ವರ್ಷದ ಅತೀ ಕಡಿಮೆ ತೂಕವುಳ್ಳ ಮತ್ತು ಸಾಧಾರಣ ಅಪೌಷ್ಠಿಕ ಮಕ್ಕಳಿಗೆ ವಾರದಲ್ಲಿ 03 ದಿನ ಮೊಟ್ಟೆಯನ್ನು ನೀಡಲಾಗುತ್ತಿದೆ.<br><br>03 ವರ್ಷದಿಂದ 06 ವರ್ಷದ ಅತಿ ಕಡಿಮೆ ತೂಕವುಳ್ಳ ಮತ್ತು ಸಾಧಾರಣ ಅಪೌಷ್ಠಿಕ ಮಕ್ಕಳಿಗೆ ವಾರದಲ್ಲಿ 5 ದಿನ ಮೊಟ್ಟೆಯನ್ನು ನೀಡಲಾಗುತ್ತಿದೆ. ಮೊಟ್ಟೆ ಸ್ವೀಕರಿಸದಿರುವ ಮಕ್ಕಳಿಗೆ ವಾರದಲ್ಲಿ 6 ದಿನ ಹಾಲನ್ನು ನೀಡಲಾಗುತ್ತಿದೆ.<br><br>ರಾಜ್ಯ ಸರ್ಕಾರದ ಕ್ಷೀರಭಾಗ್ಯ ಯೋಜನೆಯಡಿ 6 ತಿಂಗಳಿಂದ 6 ವರ್ಷದ ಎಲ್ಲಾ ಮಕ್ಕಳಿಗೆ ವಾರದಲ್ಲಿ 05 ದಿನ 150 ಎಂ.ಎಲ್. ಕೆನೆಸಹಿತ ಹಾಲನ್ನು ನೀಡಲಾಗುತ್ತಿದೆ. |

| | | |
|---|---|---|
| | | 06 ತಿಂಗಳಿನಿಂದ 06 ವರ್ಷದ ಅತೀ ಕಡಿಮೆ ತೂಕವುಳ್ಳ ಮತ್ತು ಸಾಧಾರಣ ಅಪೌಷ್ಠಿಕ ಮಕ್ಕಳಿಗೆ ವಾರದಲ್ಲಿ 03 ದಿನ (ದಿನಕ್ಕೆ 20 ಗ್ರಾಂ) ಹೆಚ್ಚುವರಿಯಾಗಿ ಮನೆಗೆ ವಿತರಿಸಲಾಗುತ್ತಿದೆ.<br><br>ಅಂಗನವಾಡಿ ಕೇಂದ್ರಗಳಲ್ಲಿ ವಿತರಿಸುವ ಪೂರಕ ಪೌಷ್ಠಿಕ ಆಹಾರದ ಕಾರ್ಯಕ್ರಮದಡಿ ಸಿರಿಧಾನ್ಯದಿಂದ ಮಾಡಿದಂತಹ ಮಿಲ್ಲೆಟ್ ಲಡ್ಡುವನ್ನು ಒದಗಿಸಲಾಗುತ್ತಿದೆ. |
| ಇ | ರಾಜ್ಯದಲ್ಲಿ ಅಂಗನವಾಡಿ ಕೇಂದ್ರಗಳಿಗೆ ಸ್ವಂತ ಕಟ್ಟಡಗಳು ಇಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಈ ಬಗ್ಗೆ ಸರ್ಕಾರ ಕೈಗೊಂಡ ಕ್ರಮಗಳೇನು; | ಬಂದಿದೆ.<br><br>ಸರ್ಕಾರವು ಪ್ರತಿ ಸಾಲಿನಲ್ಲಿ ಸ್ವಂತ ಅಂಗನವಾಡಿ ಕಟ್ಟಡಗಳ ನಿರ್ಮಾಣಕ್ಕಾಗಿ ಆಯವ್ಯಯದಲ್ಲಿ ಮೀಸಲಿರಿಸಿದ ಅನುದಾನ ಬಿಡುಗಡೆ ಗೊಳಿಸುತ್ತಿದ್ದು, ಬಿಡುಗಡೆಯಾದ ಅನುದಾನಕ್ಕೆ ಅನುಗುಣವಾಗಿ ಮತ್ತು ನಿವೇಶನ ಲಭ್ಯತೆಗನುಗುಣವಾಗಿ ಕಟ್ಟಡಗಳ ನಿರ್ಮಾಣ ಕಾಮಗಾರಿಯನ್ನು ಕೈಗೊಳ್ಳಲಾಗುತ್ತಿದೆ. |
| ಈ. | ಕಳೆದ ಐದು ವರ್ಷಗಳಲ್ಲಿ ಅಂಗನವಾಡಿಗಳಿಗೆ ಪೌಷ್ಠಿಕಾಂಶ ಪೂರೈಕೆಗಾಗಿ ಹಾಗೂ ಮೂಲಸೌಕರ್ಯ ಅಭಿವೃದ್ಧಿಗಾಗಿ ಇಲಾಖೆಗೆ ನೀಡಲಾದ ಅನುದಾನ ಎಷ್ಟು; ಖರ್ಚಾದ ಅನುದಾನ ಎಷ್ಟು? (ಜಿಲ್ಲಾವಾರು ಮಾಹಿತಿ ನೀಡುವುದು) | ಕಳೆದ ಐದು ವರ್ಷಗಳಲ್ಲಿ ಅಂಗನವಾಡಿಗಳಿಗೆ ಪೌಷ್ಠಿಕಾಂಶ ಪೂರೈಕೆಗಾಗಿ ಹಾಗೂ ಮೂಲಸೌಕರ್ಯ ಅಭಿವೃದ್ಧಿಗಾಗಿ ಇಲಾಖೆಗೆ ನೀಡಲಾದ ಅನುದಾನ ಹಾಗೂ ಖರ್ಚಾದ ಅನುದಾನದ ವಿವರವನ್ನು ಅನುಬಂಧದಲ್ಲಿ ಒದಗಿಸಲಾಗಿದೆ. |

**ಸಂಖ್ಯೆ: ಮಮಇ 63 ಐಸಿಡಿ 2024**

**(ಲಕ್ಷ್ಮೀ ಆರ್. ಹೆಬ್ಬಾಳಕರ್)**
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ
ವಿಕಲಚೇತನರ ಹಾಗೂ ಹಿರಿಯ ನಾಗರಿಕರ
ಸಬಲೀಕರಣ ಸಚಿವರು.

| ಅನುಬಂಧ4 | | | | | | |
|---|---|---|---|---|---|---|
| **ಕಳೆದ 5 ವರ್ಷಗಳಲ್ಲಿ ಅಂಗನವಾಡಿಗಳಲ್ಲಿ ಮೂಲಸೌಕರ್ಯ ಅಭಿವೃದ್ಧಿಗಾಗಿ ಇಲಾಖೆಯಿಂದ ನೀಡಲಾದ ಅನುದಾನದ ಜಿಲ್ಲಾವಾರು ವಿವರ (ರೂ.ಲಕ್ಷಗಳಲ್ಲಿ)** | | | | | | |
| **ಕ್ರ.ಸಂ.** | **ಜಿಲ್ಲೆಯ ಹೆಸರು** | **2019-20** | **2020-21** | **2021-22** | **2022-23** | **2023-24** |
| 1 | ಬಾಗಲಕೋಟೆ | 135 | 41.00 | 129.02 | 90.00 | 125.00 |
| 2 | ಬೆಂಗಳೂರು (ಗ್ರಾ) | 71 | 44.00 | 38.12 | 65.00 | 88.00 |
| 3 | ಬೆಂಗಳೂರು ನಗರ | 120 | 44.00 | 70.90 | 50.00 | 93.00 |
| 4 | ಬೆಳಗಾವಿ | 220 | 33.00 | 253.60 | 220.00 | 322.00 |
| 5 | ಬಳ್ಳಾರಿ | 170 | 62.00 | 47.00 | 70.00 | 94.00 |
| 6 | ಬೀದರ್ | 62 | 24.00 | 140.40 | 60.00 | 93.00 |
| 7 | ವಿಜಯಪುರ | 76 | 44.00 | 210.40 | 80.00 | 118.00 |
| 8 | ಚಾಮರಾಜನಗರ | 110 | 27.00 | 72.50 | 100.00 | 125.00 |
| 9 | ಚಿಕ್ಕಬಳ್ಳಾಪುರ | 75 | 28.00 | 26.20 | 65.00 | 98.00 |
| 10 | ಚಿಕ್ಕಮಗಳೂರು | 81 | 44.00 | 45.43 | 68.00 | 99.00 |
| 11 | ಧಾರವಾಡ | 66 | 26.00 | 74.80 | 62.00 | 89.00 |
| 12 | ಚಿತ್ರದುರ್ಗ | 89 | 24.00 | 104.20 | 35.00 | 74.00 |
| 13 | ದಕ್ಷಿಣ ಕನ್ನಡ | 185 | 44.00 | 15.00 | 175.00 | 206.00 |
| 14 | ದಾವಣಗೆರೆ | 140 | 36.00 | 116.21 | 120.00 | 154.00 |
| 15 | ಗದಗ | 95 | 44.00 | 53.50 | 100.00 | 123.00 |
| 16 | ಕಲಬುರಗಿ | 154 | 44.00 | 432.80 | 130.00 | 187.00 |
| 17 | ಹಾಸನ | 134 | 43.00 | 49.20 | 100.00 | 145.00 |
| 18 | ಹಾವೇರಿ | 132 | 21.00 | 81.20 | 75.00 | 109.00 |
| 19 | ಕೊಡಗು | 100 | 16.00 | 17.00 | 80.00 | 99.00 |
| 20 | ಕೋಲಾರ | 78 | 15.00 | 280.25 | 80.00 | 116.00 |
| 21 | ಕೊಪ್ಪಳ | 153 | 20.00 | 167.80 | 90.00 | 125.00 |
| 22 | ಮಂಡ್ಯ | 118 | 36.00 | 170.63 | 75.00 | 119.00 |
| 23 | ಮೈಸೂರು | 153 | 26.00 | 152.25 | 150.00 | 200.00 |
| 24 | ರಾಯಚೂರು | 84 | 44.00 | 204.95 | 60.00 | 105.00 |
| 25 | ರಾಮನಗರ | 84 | 28.00 | 48.16 | 72.00 | 94.00 |
| 26 | ಶಿವಮೊಗ್ಗ | 88 | 48.00 | 67.99 | 68.00 | 109.00 |
| 27 | ತುಮಕೂರು | 230 | 0.00 | 258.90 | 230.00 | 302.00 |
| 28 | ಉಡುಪಿ | 95 | 28.00 | 11.80 | 80.00 | 102.00 |
| 29 | ಉತ್ತರ ಕನ್ನಡ | 97 | 55.00 | 41.31 | 90.00 | 137.00 |
| 30 | ಯಾದಗಿರಿ | 81 | 11.00 | 118.48 | 60.00 | 83.00 |
| 31 | ವಿಜಯನಗರ | 0.00 | 0.00 | 0.00 | 80.00 | 100.00 |
| **ಒಟ್ಟು** | | **3476.00** | **1000.00** | **3500.00** | **2880.00** | **4033.00** |